


International Journal of Kannada Research
www.kannadajournal.com

**ISSN: 2454–5813**
IJSR 2016; 2(4): 28-30
© 2016 IJKS
www.kannadajournal.com
Received: 06-08-2016
Accepted: 07-09-2016

**ಬಸವರಾಜ ಕೆ, ಹೆಚ್**
ಸಂಶೋಧನ ವಿದ್ಯಾರ್ಥಿ ಡಾ.ಡಿ.ವಿ.ಗುಂಡಪ್ಪ
ಕನ್ನಡ ಅಧ್ಯಯನ ಕೇಂದ್ರ
ತುಮಕೂರುವಿಶ್ವವಿದ್ಯಾನಿಲಯ, ತುಮಕೂರು

**ಮಾರ್ಗದರ್ಶಕರು:**
ಡಾ.ಎಸ್.ಶಿವಣ್ಣ ಎಂ.ಎ. ಪಿಎಚ್.ಡಿ
ವಿಶ್ವವಿದ್ಯಾನಿಲಯ ಕಲಾ ಕಾಲೇಜು
ತುಮಕೂರುವಿಶ್ವವಿದ್ಯಾನಿಲಯ, ತುಮಕೂರು

# ಚಿಕ್ಕಮಗಳೂರು ಜಿಲ್ಲೆಯ ಜಾತ್ರೆಗಳು: ವಿಶ್ಲೇಷಣೆ

**ಬಸವರಾಜ ಕೆ, ಹೆಚ್, ಮಾರ್ಗದರ್ಶಕರು**

ಮನುಷ್ಯ ಅಲೆಮಾರಿಯಾಗಿ ಆಹಾರದ ಅನ್ವೇಷಣೆಗಾಗಿ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುತ್ತಿದ್ದ, ಪ್ರಾಣಿ ಸಸ್ಯಗಳೂ ಸೇರಿದಂತೆ ಪ್ರಕೃತಿಯ ಪ್ರತಿಯೊಂದು ವಸ್ತುವೂ ಅವನಿಗೆ ಕುತೂಹಲವಾದವು. ಮಳೆ–ಬೆಳೆ, ಬಿಸಿಲು–ಗುಡುಗು–ಮಿಂಚು ಇತ್ಯಾದಿ ಇವುಗಳ ಹಿಂದೆ ಗಂಡಾಂತರ ಇರುವುದರ ಅನುಭವಾಯಿತು. ಅದರ ವಿರುದ್ಧ ಹೋರಾಡುವುದಕ್ಕೆ ಬದಲಾಗಿ ಅವುಗಳನ್ನು ಪೂಜಿಸಿ ಒಲಿಸಿಕೊಳ್ಳುವ ಪ್ರಯತ್ನ ಪ್ರಾರಂಭಿಸಿದ. ತನ್ನ ಸುತ್ತಲಿನ ಪ್ರತಿ ಅಚ್ಚರಿಗಳಿಗೆ ರೂಪಕೊಡುವ ಈ ಹಂತದಲ್ಲಿ ಜನಪದರ ಭಿತ್ತಿಯಾಗಿ, ಭಕ್ತಿಯ ಸಂಕೇತವಾಗಿ ಗ್ರಾಮದೇವತೆಗಳು ಉಗಮವಾದವು. ಜನಪದರಿಂದ ಸೃಷ್ಠಿಗೊಂಡ ಮಾತೃದೇವತೆಗಳು ಜನಪದರ ಭಯ, ಭಕ್ತಿ ಮತ್ತು ಅವರ ನಂಬಿಕೆ ಶ್ರದ್ಧೆಯ ಮನೋಭಿಲಾಷೆಗೆ ತಕ್ಕಂತೆ ರೂಪುಗೊಂಡಿವೆ. ಉಗ್ರರೂಪದ ಮಾತೃದೇವತೆಗಳು ಪ್ರೀತಿ–ತ್ಯಾಗ, ಸೌಹಾರ್ದತೆ ಮತ್ತು ಭಾವೈಕ್ಯತೆಯಂಥ ಮೌಲ್ಯಗಳಿಗೆ ಹಾಗೂ ಸಂವೃದ್ಧಿತನಕ್ಕೆ ಸಂಕೇತವಾದವು. ಸೌಮ್ಯರೂಪದ ದೇವತೆಗಳು ಜ್ಞಾನ, ಸಂಪತ್ತು, ಭೋಗ ವೈಭವದ ದ್ಯೋತಕವಾದವು. ಹಾಗಾಗಿ ಜನಪದರ ನಂಬಿಕೆಗಳಿಗನುಗುಣವಾಗಿ ಎಲ್ಲಾ ದೈವಗಳಿಗೆ ಒಂದೊಂದು ರೀತಿಯ ಪೂಜೆ ಸೃಷ್ಟಿಯಾಯಿತು. ಕಾಲಕ್ರಮೇಣ ಇದು ಜಾತ್ರಾ ಸ್ವರೂಪದ ಬೆಳವಣಿಗೆಗೆ ನಾಂದಿಯಾಯಿತು. ಮುಂದಿನ ದಿನಗಳಲ್ಲಿ ಈ ಜಾತ್ರೆಗಳು ಸಾಂಸ್ಕೃತಿಕ ಹಾಗೂ ಸಾಮಾಜಿಕ ಮಹತ್ವವನ್ನು ಪಡೆದುಕೊಂಡಿದ್ದವು. ಈ ಕಾರಣದಿಂದಲೇ ಜಾತ್ರೆಗಳ ಸಾಂಸ್ಕೃತಿಕ ಅಧ್ಯಯನ ವಿಧಾನವು ಆಧುನಿಕ ಸಂದರ್ಭದಲ್ಲಿ ವ್ಯಾಪಕವಾಗಿ ಬೆಳೆಯುತ್ತಿರುವ ಕ್ಷೇತ್ರವಾಗಿದೆ. ಜಾತ್ರೆಗಳು ಸಮಾಜದಲ್ಲಿ ಭಾವೈಕ್ಯತೆಯನ್ನು ಬೆಳೆಸುವ ಒಂದು ಮಾರ್ಗವಾಗಿ ಕಂಡು ಬರುತ್ತವೆ. ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಸಮಾಜದೊಂದಿಗೆ ಸಂಬಂಧವನ್ನು ಬೆಳೆಸಿಕೊಂಡಿರುವ ಬಗೆ ಹಾಗೂ ಜಾತ್ರೆಗಳನ್ನು ಕೇಂದ್ರೀಕರಿಸಿ ಸಮಾಜದ ವ್ಯಾಪಾರ, ಸಾಹಿತ್ಯ, ಸಂಸ್ಕೃತಿ, ಜಾತಿ, ಜನಸಮುದಾಯ ಒಕ್ಕಲು ಬಳಗ ಹಾಗೂ ಇವುಗಳ ನಡುವೆ ಇರಬಹುದಾದ ಕೊಡು–ಕೊಳುಗೆಗಳು, ಅದರಿಂದಾಗಿರುವ ಅರಿವಿನ ಬಗೆಗಳ ಅಧ್ಯಯನ ಪ್ರಮುಖವೆನಿಸುತ್ತದೆ. ಸಂಬಂಧವನ್ನು ಹೇಗೆ ಬೆಳೆಸಿಕೊಂಡಿವೆ? ಜಾತಿಯ ಆಧಾರದ ಕೆಲಸಗಳ ಹಂಚಿಕೆ ಆಗುತ್ತಿದ್ದ ಪದ್ಧತಿ, ಜಾತಿ ವ್ಯವಸ್ಥೆಯಲ್ಲಿನ ಕಟ್ಟು ಪಾಡುಗಳು ಮುಂತಾದ ಸಂಗತಿಗಳ ನೆಲೆಗಳನ್ನು ಜಾತ್ರೆಯ ಹಿನ್ನಲೆಯಲ್ಲಿ ಚರ್ಚಿಸಿದಾಗ ಅನಾವರಣವಾಗುವ ಸಾಮಾಜಿಕ ಸ್ತರ ವಿನ್ಯಾಸಗಲು ಬೇರೆ ಸ್ವರೂಪವನ್ನು ತೆರೆದಿಡುತ್ತವೆ. ಜಾತ್ರೆಯಿಂದ ವ್ಯಾಪಾರಸ್ಥರಿಗೆ ಅನುಕೂಲವೇ ಆಗಿದೆ. ಇದರಿಂದ ಜಾತ್ರೆಗೆ ಆಗುವ, ದೇವಸ್ಥಾನಕ್ಕೆ ಆಗುವ ಲಾಭದ ಬಗ್ಗೆ ಹಾಗೂ ಆಸಾದಿಗಳು ಜಾತ್ರೆಗಳಲ್ಲಿ ದೇವರಿಗೆ ಭಕ್ತಿಯ ರೂಪದಲ್ಲಿ ಹೊರಹಾಕುವ ಪದಗಳು ಜನಪದರ ಸುಪ್ತ ಜ್ಞಾನಗಳಾಗಿವೆ. ಜಾತ್ರೆಗಳು ಸಾಹಿತ್ಯಿಕ, ಸಾಂಸ್ಕೃತಿಕ ಅಂಶಗಳನ್ನು ಬಿಂಬಿಸುತ್ತವೆ. ಜಾತ್ರೆಗಳು ಅಂದಿನ ಸ್ವರೂಪ, ಆಧುನಿಕ ಸಂದರ್ಭದ ಇಂದಿನ ಪರಿವರ್ತಿತಗೊಂಡ ಸ್ವರೂಪವನ್ನು ಮುಖಾಮುಖಿಯಾಗಿದಾಗ ಜಾತ್ರೆಗಳ ಅಂದಿನ ಸಾಮಾಜಿಕ ಮಹತ್ವ ಅರಿವಾಗುತ್ತದೆ. ಜಾತ್ರೆಗಳ ಪರಿಕಲ್ಪನೆಯಿಂದ ಅವುಗಳ ಆಚರಣೆಯಿಂದ ತೊಂದರೆ ತೊಡಕುಗಳು ಕಂಡು ಬಂದರೂ, ದೇವರ ಮೇಲಿನ ನಂಬಿಕೆಗಳು, ಜನಪದರು ಆ ದೈವೀನೆಲೆಯ ಆಚರಣೆಗಳಲ್ಲಿ, ಹರಕೆಗಳಲ್ಲಿ, ಸಂಪ್ರದಾಯಗಳಲ್ಲಿ ತೊಡಗುವಂತೆ ಮಾಡುತ್ತಿದ್ದ ಕ್ರಮ ಗಮನಾರ್ಹ. ಮುಖ್ಯವಾಗಿ ಜಾತ್ರೆಯೆಂದರೆ ಸಂಭ್ರಮ ಈ ಸಂಭ್ರಮವನ್ನು ಗ್ರಾಮೀಣರು ಸಾಮೂಹಿಕವಾಗಿ ಅನುಭವಿಸುತ್ತಾರೆ. ಜಾತ್ರೆಗಳು ಮೂಲತಃ ಜಾತ್ಯಾತೀತ ಪರಿಕಲ್ಪನೆಗಳು. ಎಲ್ಲಾ ಜಾತಿಯ, ಎಲ್ಲಾ ಸ್ತರದ ಜನರನ್ನು ಒಟ್ಟುಗೂಡಿಸಿ ಅವರೆಲ್ಲರ ಸಹಕಾರ ಹಾಗೂ ಸಹಯೋಗದಿಂದ ನೆರವೇರುವ ಪೂಜೆ ಪುನಸ್ಕಾರಗಳಲ್ಲಿ ಒಂದು ಬಗೆಯ ಸಹಬಾಳ್ವೆಯ ಆದರ್ಶಗಳನ್ನು ಗುರುತಿಸಬಹುದು. ಜಾತ್ರೆ ಅಥವಾ ರಥೋತ್ಸವ ಇವೆರಡೂ ಕೆಲವೆಡೆ ಒಂದೇ ಅರ್ಥದಲ್ಲಿ ಬಳಕೆಯಾಗುತ್ತಿದ್ದರೂ ಇವು ವಿಭಿನ್ನ ಪರಿಕಲ್ಪನೆಗಳು. ಜಾತ್ರೆಯನ್ನು ಕುರಿತು ಅಧ್ಯಯನ ಮಾಡುವಾಗ ಆನೇಕ ಬಗೆಯ ಸಮಸ್ಯೆಗಳು

**Correspondence**
**ಬಸವರಾಜ ಕೆ, ಹೆಚ್**
ಸಂಶೋಧನ ವಿದ್ಯಾರ್ಥಿ ಡಾ.ಡಿ.ವಿ.ಗುಂಡಪ್ಪ
ಕನ್ನಡ ಅಧ್ಯಯನ ಕೇಂದ್ರ
ತುಮಕೂರುವಿಶ್ವವಿದ್ಯಾನಿಲಯ, ತುಮಕೂರು

ಎದುರಾಗುವುದು ಸಹಜವಾಗಿದೆ. ಆದಾಗ್ಯೂ ದೇವರ ಬಗೆಗಿನ ನಂಬಿಕೆಗಳೊಂದಿಗೆ ಜನಪದರು ನಿರಂತರವಾಗಿ ಆಚರಿಸುತ್ತಾ ಬರುತ್ತಿರುವ ಆಚರಣೆಗಳೆಲ್ಲವನ್ನು ಜಾತ್ರೆಗಳೆನ್ನೆಹುದಾಗಿದೆ. ದೇ,ಜ,ಗೌ ಹೇಳಿರುವಂತೆ :–ತಾಯಿ ಬೇರು ಭರತ ಕಾಲದ ಗರ್ಭದಲ್ಲಿ ಹೂತುಕೊಂಡಿದ್ದರು ಅವುಗಳ ಆದಿ ಮಾನವನ ಕಾಲದಿಂದಲೇ ಧಾರ್ಮಿಕ ಆಚರಣೆಗಳು ಬದುಕಿನ ಒಂದು ಪ್ರಮುಖ ಭಾಗವಾಗಿ ರೂಡಿಯಲ್ಲಿದ್ದಿರಬೇಕೆಂದು" ಹೇಳುವ ಮಾತು ಜಾತ್ರೆಗಳ ಮಹತ್ವವನ್ನು ತಿಳಿಸುತ್ತದೆ. ಸಾಮಾನ್ಯವಾಗಿ ಆದಿ ಮಾನವರ ದೇವತಾರಾಧನೆಯ ಧಾರ್ಮಿಕಾಚರಣೆಗಳು ಸಾಮಾಜಿಕವಾಗಿ ನಡೆಯುತ್ತಿದ್ದವು. ಮಾನವನ ನಿರಂತರ ಅಲೆಮಾರಿತನದಿಂದ ಪಾರಾಗಲು ಅವನು ನೀರು ನೆಲೆ ಕಂಡಕಡೆ ನೆಲೆಯೂರಿದ. ಅನಂತರ ಅಲೆಮಾರಿಯ ಜನ ಬುಡಕಟ್ಟಿನ ಜನರಾಗಿ ಪರಿವರ್ತನೆಗೊಂಡ ಸಂದರ್ಭದಲ್ಲಿ ಜಾತ್ರೆಗಳು ಸರಳವಾಗಿ ಕಾಣಿಸಿಕೊಂಡಿರಬೇಕು ಎನಿಸುತ್ತದೆ.

ಜಾತ್ರೆ ಎಂಬ ಪದವು ಸಂಸ್ಕೃತದ ಯಾತ್ರಾ ಪದದ ತದ್ಭವ ರೂಪ. ಜಾತ್ರೆ. ಪರಿಸೆ, ಪರ್ವ ಈ ಪದಗಳು ಸಹ ಕನ್ನಡಕ್ಕೆ ಬಂದಿರುವ ಸಂಸ್ಕೃತದ ಪದಗಳಾಗಿವೆ. ಸಂಸ್ಕೃತದ ಪರಿಷತ್ ಪದದ ಪರಿಭಾವ ಪರ್ಷೆಯಾಗಿ, ಪರುಷೆಯಾಗಿ ಬಳಕೆಯಾಗಿದೆ. ಜಾತ್ರೆ ಎಂದು ಹುಟ್ಟಿತು? ಹೇಗೆ ಹುಟ್ಟಿತು? ಅದು ಮೂಲದಲ್ಲಿ ಯಾವ ರೂಪದಲ್ಲಿತ್ತು? ನಂತರ ಎಂತಹ ಬದಲಾವಣೆ ಕಂಡಿತು? ಈ ಬದಲಾವಣೆಗೆ ಕಾರಣಗಳೇನು? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಕಷ್ಟಸಾಧ್ಯ. ಕೆಲವರು ಇತಿಹಾಸ ಜ್ಞಾನದಿಂದ ಉತ್ತರಿಸಲು ಪ್ರಯತ್ನಿಸಿದರೆ, ಹೆಚ್ಚಿನವರು ಊಹೆ ಮತ್ತು ತರ್ಕಗಳಿಂದಲೂ ಉತ್ತರಿಸಬೇಕಾಗುತ್ತದೆ. ಈ ರೀತಿ ಜಾತ್ರೆಯೆಂಬ ಪದವು ಜನಪದರ ಅವಿಭಾಜ್ಯ ಅಂಗವಾಗಿ ಸರ್ವಧರ್ಮಗಳನ್ನು ಒಂದೆಡೆ ಸೇರಿಸುವಂತಹ ಸಮಾನತೆಯ ಯಾತ್ರೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಜರುಗುವ ಎಲ್ಲಾ ಜಾತ್ರೆಗಳು ಏಕಮುಖತ್ವದಿಂದ ಬಹುಮುಖತ್ವದೆಡೆಗೆ ನಡೆಯುವ ಸಮಾಜಿಕ ಸ್ವರೂಪವನ್ನು ಪಡೆದುಕೊಂಡಿವೆ. ಜನರ ಎಲ್ಲಾ ಸಂಭ್ರಮಗಳ ಪ್ರತೀಕವಾದ ಜಾತ್ರೆಗಳು ರೂಪುಗೊಳ್ಳಲು ಕಾರಣ ಹಾಗೂ ಅವುಗಳ ವಿಕಾಸ ಕುತೂಹಲದಿಂದ ಕೂಡಿದೆ. ಅದು ಜನಪದರ ಬದುಕಿಗೆ ತಂದಿತ್ತ ಸಾಂಸ್ಕೃತಿಕ ಚೌಕಟ್ಟು, ಅದರಿಂದ ಸಮುದಾಯಗಳಿಗೆ ಆದ ಲಾಭ–ನಷ್ಟಗಳನ್ನು ಸಾಮಾಜಿಕ ಸಂಕಥನದ ಮಾದರಿಯ ಅಧ್ಯಯನಕ್ಕೆ ತೊಡಗಿದರೆ ಜಾತ್ರೆಗಳ ಸಾಮಾಜಿಕ ಮಹತ್ವ ಹಾಗೂ ಅವು ತಮ್ಮ ಉಡಿಯೊಳಗೆ ಇಟ್ಟುಕೊಂಡಿದ್ದ ಸಾಂಸ್ಕೃತಿಕ ಮಹತ್ವ ಅರಿವಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಜರುಗುವ ಜಾತ್ರೆಗಳನ್ನು ಜನಾಂಗ ಪ್ರಿಯವಾಗಿ, ಜಾತಿಯವಾಗಿ, ವರ್ಗ, ಪ್ರಾದೇಶಿಕ ಹೀಗೆ ಹಲವಾರು ವಿಧಗಳಾಗಿ ವರ್ಗೀಕರಿಸಬಹುದು. ಅವುಗಳಲ್ಲಿ ಪ್ರಮುಖವಾಗಿ ಗ್ರಾಮ ದೇವತೆಗಳು, ಶಿಷ್ಠ ದೇವತೆಗಳು, ಉರುಸ್, ಕ್ರೈಸ್ತ ದೇವತೆಗಳ ಜಾತ್ರೆಗಳು ಈ ರೀತಿಯಾಗಿ ಜಾತ್ರೆಗಳನ್ನು ಹಲವು ಭಾಗಗಳಾಗಿ ಗುರುತಿಸಿ ಅಧ್ಯಯನ ಕ್ಕೊಳಪಡಿಸಬಹುದಾದ ಸರಕು ಈ ಜಿಲ್ಲೆಯ ಜಾತ್ರೆಗಳ ಆಚರಣಾ ಕ್ರಮದಲ್ಲಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಲವು ಜಾತಿ ಧರ್ಮಗಳ ಜನಸಮುದಾಯವಿದೆ. ಅವರು ತಮ್ಮದೇ ಆದಂತಹ ರೀತಿಯಲ್ಲಿ ಸಂಪ್ರದಾಯಗಳನ್ನು ಉಳಿಸಿಕೊಂಡು ಮುಂದುವರಿಕೆಯಾಗಿ ವಿಶೇಷ ಆಚರಣೆಗಳನ್ನು ರೂಢಮೂಲವಾಗಿ ಅನುಸರಿಸುತ್ತಿದ್ದಾರೆ. ಹಿಂದೂಗಳು ವಿಶೇಷವಾಗಿ ವರ್ಷಕ್ಕೆ ಒಮ್ಮೆ ಆಚರಿಸುವಂತಹ ಸಗುನಿ ರಂಗನಾಥನ ಜಾತ್ರೆ, ಅಂತರಘಟ್ಟಮ್ಮನಜಾತ್ರೆ ಇತ್ಯಾದಿ, ಮುಸ್ಲಿಂ ಸಮುದಾಯದವರು ಕೆಲವೊಮ್ಮೆ ಉರುಸ್‌ಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಆದೆ ರೀತಿ ಕ್ರೈಸ್ತ ಜನಾಂಗದವರು ಶುಭ ಶುಕ್ರವಾರ ಕ್ರಿಸ್‌ಮಸ್ ಹಬ್ಬವನ್ನು ವಿಶೇಷವಾಗಿ ಅಚರಿಸುತ್ತಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಧಾನವಾಗಿ ಸುಮಾರು ಐವತ್ತಕ್ಕೂ ಅಧಿಕ ಜಾತ್ರೆಗಳು ಜರುಗುತ್ತವೆ. ರಾಷ್ಟ್ರಮಟ್ಟದ, ರಾಜ್ಯಮಟ್ಟದ, ಜಿಲ್ಲಾಮಟ್ಟದ, ತಾಲ್ಲೋಕು, ಗ್ರಾಮ ಹೀಗೆ ಎಲ್ಲಾ ಹಂತದ ಜಾತ್ರೆಗಳನ್ನು ವಿಸ್ತೃತವಾಗಿ ಬಹು ಆಯಾಮಗಳಲ್ಲಿ ಹಿಡಿಯಾಗಿ ನೋಡಿದಾಗ ಅವುಗಳ ಆಚರಣೆಯಲ್ಲಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಬಾಹುಳ್ಯತೆ ಗೋಚರವಾಗುತ್ತದೆ. ಪ್ರಧಾನವಾಗಿ ಅಂತರಘಟ್ಟಮ್ಮ ಜಾತ್ರೆ, ಹುಲಿಕೆರೆಯಮ್ಮ ಜಾತ್ರೆ, ಹಲಘಟ್ಟಮ್ಮ ಜಾತ್ರೆ, ಸೋಮೇಶ್ವರ ಜಾತ್ರೆ, ಸಖರಾಯಪಟ್ಟಣ ಜಾತ್ರೆ, ಬೀರೂರಿನ ಮೈಲಾರ ಲಿಂಗೇಶ್ವರ ಜಾತ್ರೆ ಇತ್ಯಾದಿ ಜಾತ್ರೆಗಳು ಈ ಮಾದರಿಯಲ್ಲಿ ಪ್ರಮುಖವೆನಿಸುತ್ತವೆ. ಚಿಕ್ಕಮಗಳೂರಿನ ಜಿಲ್ಲೆಯ ವಿವಿಧ ಪ್ರಾಂತಗಳಲ್ಲಿ ಜರುಗುವ ಜಾತ್ರೆಗಳನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡುವಾಗ ಹಲವಾರು ವಿಧಗಳಲ್ಲಿ ಅವುಗಳನ್ನು ವಿಂಗಡಿಸಿ ನೋಡಬಹುದು. ಉತ್ಸವ, ಹರಕೆ, ಆಚರಣೆ, ನಂಬಿಕೆ, ವ್ಯಾಪಾರ, ಮೆರವಣಿಗೆ, ದನಗಳ ಜಾತ್ರೆ, ಜಾನಪದ ನೃತ್ಯಗಳು ಹೀಗೆ ಜಾತ್ರೆಗಳ ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಳ್ಳುವಾಗ ಆಚರಣೆಯ ವಿಧಿವಿಧಾನಗಳ ಆಧಾರದಲ್ಲಿ ಕೆಲವು ಬದಲಾವಣೆಗಳನ್ನು ಕಾಣಬಹುದು. ಚಿಕ್ಕಮಗಳೂರಿನ ಜಿಲ್ಲೆಯ ಎಲ್ಲಾ ಜಾತ್ರೆಗಳಲ್ಲಿ ಕಂಡುಬರುವ, ಚರ್ಚೆ ಮಾಡಬಹುದಾದ ಉತ್ಸವಗಳ ಆಚರಣೆಗಳಲ್ಲಿ ಹಾಗೂ ಅದರ ಸಂಶೋಧನಾ ನೆಲೆಯ ಭಿನ್ನತೆಗಳ ತಾತ್ವಿಕತೆಯಲ್ಲಿ ಅಂತರ್ ಶಿಸ್ತೀಯಗುಣವಿದೆ. ಆಂತರಘಟ್ಟಮ್ಮದೇವಿಯ ಉತ್ಸವ, ಸಗನಿ ರಂಗನಾಥ ಸ್ವಾಮಿ ಉತ್ಸವ, ಆಲಘಟ್ಟಮ್ಮದೇವಿಯ ಉತ್ಸವಗಳನ್ನು ಹೆಸರಿಸಬಹುದು. ಈ ಜಾತ್ರೆಗಳಲ್ಲಿ ಭಕ್ತರು ತಮ್ಮ ಬಯಕೆಗಳ ಈಡೇರಿಕೆಗಾಗಿ ಕಟ್ಟುವ ಹರಕೆಗಳು, ಅದರ ವಿಧಿ–ವಿಧಾನಗಳ ನೆರವೇರಿಕೆಗಾಗಿ ವಿವಿಧ ಬಗೆಯ ಆಚರಣೆಗಳನ್ನು ಕೈಗೊಳ್ಳುತ್ತಾರೆ. ಅಲ್ಲದೆ ವ್ಯಾಪಾರ, ಮೆರವಣಿಗೆ, ಧನಗಳ ಜಾತ್ರೆಗಳ ಬಗ್ಗೆ ಹಾಗೂ ಜನಪದ ನೃತ್ಯಗಳಾದ ಸೋಮನಕುಣಿತ, ಡೊಳ್ಳು, ವೀರಗಾಸೆ, ಪಟ್ಟದ ಕುಣಿತ, ಕೋಲಾಟ, ಲಂಬಾಣಿ ನೃತ್ಯ, ಗೊರವರ ಕುಣಿತ ಹೀಗೆ ಹಲವು ಪ್ರಕಾರಗಳಲ್ಲಿ ಸಾಮ್ಯತಾ ಮಾರ್ಗದ ಸಾಂಸ್ಕೃತಿಕ ಬೇರು ಆವರಿಸಿಕೊಂಡಿದೆ.

ಭಾರತೀಯ ಸಾಂಸ್ಕೃತಿಯ ಅಧ್ಯಯನವು ಬಹುಮುಖ್ಯವಾಗಿ ಗ್ರಾಮ ಮತ್ತು ಗ್ರಾಮದೇವತೆಗಳ ಅಧ್ಯಯನದ ಆಯಾಮಗಳನ್ನು ಒಳಗೊಂಡಿರುತ್ತದೆ. ಜಾತ್ರೆಗಳ ಅಧ್ಯಯನ ನೆಲೆಯ ಸ್ವರೂಪವನ್ನು ಚರ್ಚಿಸಿ ಹೇಳುವುದಾದರೆ ಆಧುನಿಕತೆ ಭರಾಟೆಯ ನಡುವೆಯೂ ಇಂದಿಗೂ ಹಳ್ಳಿಗಳಲ್ಲಿ ಜನರು ತಮ್ಮ ರೂಢಿ–ಸಂಪ್ರದಾಯಗಳನ್ನು ಜೀವಂತವಾಗಿರಿಸಿಕೊಂಡಿದ್ದಾರೆ. ಜಾತ್ರೆಗಳು ತಮ್ಮ ಮೂಲ ಸ್ವರೂಪದಲ್ಲಿ ಬದಲಾಗಿದ್ದರೂ ಇಂದಿಗು ಜನರನ್ನು ಒಂದೆಡೆ ಸೇರಿಸುವ, ನಲಿಯುವ, ಸಂಭ್ರಮಿಸುವ, ಹಬ್ಬ ಹರಿದಿನಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವ ಮೂಲಕ ಜನಮನದಲ್ಲಿ ಅಚ್ಚಳಿಯದ ಅನುಭವಗಳನ್ನು ಮೂಡಿಸುತ್ತವೆ. ಜನಪದರ ಬದುಕಿನಲ್ಲಿ ಪ್ರೀತಿ ಸಾಮರಸ್ಯವನ್ನು ಬೆಳಸುವಲ್ಲಿ ಕಾರಣೀಭೂತವಾಗಿವೆ. ಜಾತ್ರೆಗಳ ಆಚರಣೆಯು ಅನಕ್ಷರಸ್ಥ ಶ್ರಮ ಜೀವಿಗಳ ಬದುಕಿನ ಸುತ್ತ ಇರುವ ಪ್ರಾಣಿವರ್ಗ, ಸಸ್ಯವರ್ಗ, ಪ್ರಕೃತಿ ನೆಲೆಯಲ್ಲೇ ಗಿರಕಿ ಹೊಡೆಯುತ್ತದೆ. ಸಮುದಾಯದೊಳಗಿನ ಕಲೆ, ಗಾದೆ, ಒಗಟು, ನಾಟಕ, ಸಾಹಿತ್ಯ, ಸಂಪ್ರದಾಯದ ಆಚರಣೆಗಳು, ನಂಬಿಕೆಗಳು, ಸಾಂಸ್ಕೃತಿಕ ವೈಶಿಷ್ಟಗಳನೆಲ್ಲಾ ಒಳಗೊಂಡು ಈ ನೆಲದ ಸೃಜನಾತ್ಮಕ ಅಭಿವ್ಯಕ್ತಿಯಾಗಿದೆ. ನೆಲ ಸಂಸ್ಕೃತಿಯ ಸೊಗಡನ್ನು ತುಂಬಿಕೊಂಡ ಜಾತ್ರಾ ಪರಂಪರೆಯು ಜನ ಬದುಕಿನ ಜೀವನಾನುಭವಗಳ ಮಿಡಿತವಾಗಿದೆ. ಜಾತ್ರೆಗಳಲ್ಲಿ ಆಚರಿಸಿಕೊಂಡು ಬರುತ್ತಿರುವ ಕೆಲವೊಂದು ಆಚರಣೆಗಳು ಸಮಾಜದ ವಿರುದ್ಧವಾಗಿವೆ ನಿಜ. ಜೀವವಿರೋದಿ ನೆಲೆಯ ಕೋಣದ ಬಲಿ, ಅಮಾನವೀಯ

ಆಚರಣೆಗಳು ಕಾನೂನು ಬಾಹಿರವಾಗಿದೆ. ಯಾಕೆಂದರೆ ಸ್ತ್ರೀ ಸ್ವಾತಂತ್ರ್ಯಹರಣ ಮಾಡುವ ಮತ್ತು ಅಸ್ಪೃಶ್ಯತೆಯನ್ನು ಹುಟ್ಟುಹಾಕುವ ಹಲವು ಆಚರಣೆಗಳು ಇಂದಿಗೂ ಕೆಲವು ಜಾತ್ರೆಗಳಲ್ಲಿ ಕಂಡುಬರುತ್ತವೆ. ಹಾಗಾಗಿ ಈ ಆಚರಣೆಗಳು ಮೌಢ್ಯವಾಗುವ ಸಾಧ್ಯತೆಗಳಿವೆ. ಆದ್ದರಿಂದ ಇಂತಹ ಆಚರಣೆಗಳ ಸಾಧಕ–ಬಾಧಕಗಳನ್ನು ವೈಜ್ಞಾನಿಕ, ಮಾನವೀಯ ಕಾಳಜಿಯ ಹಿನ್ನಲೆಯಲ್ಲಿ ಚರ್ಚಿಸುವ ಅಗತ್ಯವಿದೆ. ಒಟ್ಟಾರೆ ಜಾತ್ರೆಗಳು ಜನಪದ ಮನಸ್ಸುಗಳನ್ನು ಒಗ್ಗೂಡಿಸುವ ಕೆಲಸ ಮಾಡುತ್ತವೆ. ಎಲ್ಲಾ ಜಾತಿ–ಜನಾಂಗ, ಧರ್ಮ ವರ್ಗದವರನ್ನು ಒಂದೆಡೆ ಸೇರಿಸುವುದರ ಜೊತೆಗೆ ನಾವೆಲ್ಲರು ಒಂದೇ ಎಂಬ ಸಂದೇಶವನ್ನು ಮಾನವಿಕ ಕಾಳಜಿಯ ಏಕತ್ವ ಸಾರುತ್ತಿರುವುದು ಚಿಕ್ಕಮಗಳೂರು ಜಿಲ್ಲೆಯ ಜಾತ್ರೆಗಳ ವಿಶೇಷವಾಗಿದೆ

ಆಧುನಿಕ ಸಂದರ್ಭದಲ್ಲಿ ವಿಜ್ಞಾನ–ತಂತ್ರಜ್ಞಾನ ಬೆಳೆದಂತೆ ಭೂಮಿಯ ಆಚೆಗಿನ ಗ್ರಹ ಉಪಗ್ರಹಗಳ ಬಗ್ಗೆ ಅನ್ವೇಷಣೆ ಹಾದಿ ತುಳಿದಿದೆ. ದೂರದರ್ಶಕದ ಕಣ್ಣಿನಲ್ಲಿ ಇಡೀ ಆಕಾಶ ಕಾಯವನ್ನೆಲ್ಲ ಶೋಧಿಸುವ ಮನಸ್ಸುಗಳು ನಿರ್ಮಿತವಾಗುತ್ತಿವೆ. ಸಾಧನವಾಗಿರುವ ದೂರದರ್ಶಕವನ್ನು ಬಳಸುವ ಮುಂಚೆ ಅದನ್ನು ಧೂಪ ದೀಪದಿಂದ ಪೂಜಿಸಿ ರಾಹುಕಾಲ ಗುಳಿಕ ಕಾಲಗಳನ್ನು ಅಳೆದು ಸುರಿದು ಒಳ್ಳೆಯ ಮೂಹೂರ್ತದಲ್ಲಿ ಅದನ್ನು ಕೈಗೆತ್ತಿಕೊಂಡು ಕಣ್ಣಿಗೆ ಹಿಡಿಯುತ್ತಾರೆ. ಆಧುನಿಕ ಯುಗದಲ್ಲಿ ವಿಜ್ಞಾನ ಇಷ್ಟೊಂದು ಮುಂದುವರೆದಿದ್ದರು ಸಹ ಎಲ್ಲೋ ಒಂದು ಕಡೆ ದೇವರಿಗೆ ಮೊರೆ ಹೋಗುವ ಈ ನಡವಳಿಕೆಯ ಹಿಂದೆ ಜನರು ತಮಗಿರುವ ದೌರ್ಬಲ್ಯಗಳನ್ನು ಮುಚ್ಚಿಕೊಳ್ಳಲು ಇಂತಹ ಆಚರಣೆಗಳಿಗೆ ವೈಜ್ಞಾನಿಕ ವಿಶ್ಲೇಷಣೆಯ ಅರ್ಥ ಹಚ್ಚಿ ರಕ್ಷಣೆ ಪಡೆಯಲು ಹವಣಿಸುತ್ತಾರೆ. ಹಿಂದೆ ಕ್ಷಾಮ ದಡಾರ ಇತ್ಯಾದಿ ಭೀಕರತೆಗಳು ಸಂಭವಿಸಿದಾಗ ಜಡ್ಡು ಜಾಪತ್ತುಗಳು ವಕ್ಕರಿಸಿದಾಗ ಜನಪದರು ಅದಕ್ಕೆ ಸಂಬಂಧಿಸಿದ ದೇವರಿಗೆ ಹರಸಿಕೊಂಡು ಜಾತ್ರಾರೂಪದ ನಡೆಸುತ್ತಿದ್ದರು. ಮಳೆ ದೇವತೆಯನ್ನು ಹೊಲಿಸಿಕೊಳ್ಳಬೇಕಾದರೆ ಆ ದೇವತೆಗೆ ಸಂಬಂಧಿಸಿದ ತಮ್ಮ ಪರಂಪರೆಯಿಂದ ಬಂದ ನಂಬಿಕೆಯ ಮೂಲ ದ್ರವ್ಯವಾದ ಪುರಾಣವನ್ನೆ ಪುನರಾವರ್ತಿಸಿ ಆಚರಿಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಆ ರೀತಿಯ ಆಚರಣೆಗಳು ಜನಪದರ ಬದುಕಿನ ಸೆಲೆಯಿಂದ ಮರೆಯಾಗಿ ಹೋಗುತ್ತಿವೆ. ಅಲ್ಲಲ್ಲಿ ಇದ್ದರು ಸಹ ಸ್ವರೂಪದಲ್ಲಿ ಸಂಪೂರ್ಣ ಬದಲಾವಣೆಗೊಂಡಿವೆ. ಇಂದಿನ ಜಾತ್ರೆಗಳಲ್ಲಿ ವಾಣಿಜ್ಯದೃಷ್ಠಿ, ವಿಕೃತಮನೋರಂಜನೆ, ರಾಜಕೀಯ ಇತ್ಯಾದಿ ವಿಷಯಗಳು ಮೆಲ್ಲನೆ ತುಸು ಹೆಚ್ಚಾಗಿಯೇ ಪ್ರವೇಶ ಪಡೆದಿವೆ. ಎಂಟು ಹತ್ತು ದಿನಗಳಿಂದ ಹಿಡಿದು ತಿಂಗಳಾನುಗಟ್ಟಲೆ ಆಚರಿಸುತ್ತಿದ್ದ ಜಾತ್ರೆಗಳ ಆಚರಣಾವಧಿ ಕಡಮೆಯಾಗುತ್ತಿದೆ. ಮಾತ್ರವಲ್ಲದೆ ಆಚರಣೆಗಳು ಬರಿಯ ನೆಪವೆಂಬಂತೆ ಜರುಗುತ್ತಿವೆ. ಹಿಂದಿನ ಜಾತ್ರೆಗಳಲ್ಲಿ ಜಾನುವಾರು ಕ್ರಯ ವಿಕ್ರಯ ಚಟುಚಟಿಕೆ, ಹರಕೆ ಹೊತ್ತು ಉತ್ಸವವನ್ನು ನಡೆಸುವ ಭಕ್ತಾಧಿಗಳ ಸಂಖ್ಯೆಯು ಜಾಸ್ತಿ ಇರುತ್ತಿತ್ತು. ಜಾತ್ರೆಗಳಲ್ಲಿ ನಡೆಯುತ್ತಿದ್ದ ಚೋಮನಕುಣಿತ, ವೀರಗಾಸೆ, ಜನಪದನೃತ್ಯ, ಉಡಿಸಲಮ್ಮನಕುಣಿತ, ಚಿಕ್ಕಮ್ಮನಕುಣಿತ, ಅದಕ್ಕೆ ಸಂಬಂಧಿಸಿದ ಸಾಹಿತ್ಯ ಇತ್ಯಾದಿ ಸಾಂಸ್ಕೃತಿಕ ಮನೊರಂಜನೆಗಳ ಜೊತೆಗೆ ಕೀಲ್ಗುದುರೆ, ಬಯಲಾಟ, ಗಿರಿಕಟ್ಟೆಲೆ, ನಾಟಕ ಕಂಪನಿಗಳು, ಜೂಜು ಕಟ್ಟೆಗಳು ಮನಸ್ಸುಗಳನ್ನು ರಂಜಿಸುವ ಆಕರ್ಷಣೆಗಳಾಗಿ ಕಂಡು ಬರುತ್ತಿದ್ದುವು.ಇಂದು ಆಧುನಿಕ ಮನುಷ್ಯನ ಬದುಕು ಸಂಕೀರ್ಣವಾಗತೊಡಗಿದೆ. ಲೇಸನ್ಸ್ ಪಡೆದ ಹೆಂಡದಂಗಡಿ, ಹೋಟೆಲ್, ಕ್ಲಬ್‌ಗಳು ಹೀಗೆ ಜಾಗತೀಕರಣದ ಬಹುರೂಪ ಇಂದು ಹಳ್ಳಿಗರ ಜೀವನದ ಒಂದು ಭಾಗವಾದ ಜಾತ್ರೆಗಳೊಳಗೆ ಪ್ರವೇಶಿಸಿದೆ. ಕುಡಿತ, ಧೂಮಪಾನ ಚಟುವಟಿಕೆಗಳಿಗೆ ಒಳಗಾದ ಗ್ರಾಮ ಬದುಕು ಬದಲಾಗುತ್ತಿದ್ದು ಜನಪದರು ತಮ್ಮತನವನ್ನೇ ಕಳೆದುಕೊಳ್ಳುತ್ತಿದ್ದಾರೆ. ಹೀಗೆ ಜಾಗತೀಕರಣವು ಒಂದು ನೆಲೆಯಲ್ಲಿ ಅನುಕೂಲ ತರುವ ಹಾಗೆ ಗೋಚರಿಸಿದ್ದರೂ ಸೂಕ್ಷ್ಮವಾಗಿ ಅದು ತನ್ನ ಬಹುಬಾಹುಗಳಿಂದ ನಮ್ಮ ಇಡಿಯ ಹಳ್ಳಿ ಸಂಸ್ಕೃತಿಯನ್ನು ಅರ್ಥಾತ್ ಅದರ ರೂಪವಾದ ಜಾತ್ರೆಗಳ ಮೂಲಕ ಅನಾವರಣಗೊಳ್ಳುತ್ತಿದ್ದ ಜನರ ಬಹುಮುಖೀ ಸಂಸ್ಕೃತಿಯನ್ನು ಅರಿವಿಲ್ಲದ ಹಾಗೆ ನುಂಗಿ ನಾಶ ಮಾಡುತ್ತಿರುವ ಬಗೆ ಹಾಗೂ ಅದರಿಂದಾಗುವ ನಮ್ಮತನದ ಅಪಾಯಗಳೇನು? ಎಂಬುದನ್ನು ಅರಿಯುವ ಚಿಂತನೆ ಈ ಹೊತ್ತಿನ ಅಧ್ಯಯನದ ಪ್ರಮುಖ ನೆಲೆಯಾಗಿದೆ. ಏಕೆಂದರೆ ಮುಂದಿನ ತಲೆಮಾರಿಗೆ ಜಾತ್ರೆಗಳ ಮಾದರಿಗಳನ್ನು ವೀಡಿಯೋ ಕ್ಲಿಪಿಂಗ್‌ಗಳ ಮೂಲಕ ತೋರಿಸಬೇಕಾದ ಅಪಾಯದ ಸ್ಥಿತಿಯಲ್ಲಿ ಇಂದು ನಮ್ಮ ಜಾತ್ರೆಗಳು ನಿಂತಿವೆ. ಅಲ್ಲದೆ ಇಂದು ಜರುಗುತ್ತಿರುವ ಜಾತ್ರೆಗಳು ಮೂಲಸೊಗಡು ಕಳೆದುಕೊಂಡ ಅವರೆಯಂತಾಗಿವೆ. ಮೂಲದಲ್ಲಿ ಇದ್ದ ಬದ್ಧತೆಯಾಗಲೀ, ನಿರ್ಮಲ ಸಂತೋಷಗಳಾಗಲೀ ಇಂದು ಆಚರಿಸುತ್ತಿರುವ ಜಾತ್ರೆಗಳಲ್ಲಿ ಮರೆಯಾಗಿದೆ. ಯಾವುದೋ ಕಳೆದ ಯುಗದ ಆಚರಣೆಗಳೇನೋ ಎಂಬಂತೆ ಮೂಲ ಆಚರಣೆಯ ತುಣುಕುಗಳು ಅಲ್ಲಲ್ಲಿ ವಿರಳವಾಗಿ ಕಾಣಸಿಗುತ್ತವೆ. ಜೊತೆಗೆ ಇರುವ ಜಾತ್ರಾ ಉತ್ಸವಗಳು ಸಂಪೂರ್ಣವಾಗಿ ಆಧುನಿಕ ಸ್ಪರ್ಶವನ್ನು ಪಡೆದುಕೊಂಡು ತಮ್ಮ ಸ್ವರೂಪವನ್ನು ಬದಲಾಯಿಸಿಕೊಂಡಿವೆ. ಹೀಗೆ ತನ್ನ ಕಬಂದ ಬಾಹುವನ್ನು ಗೊತ್ತಿಲ್ಲದ ರೀತಿ ಚಾಚುತ್ತಲೇ ಬದಲಾವಣೆ ತರುತ್ತಿರುವ ಜಾಗತೀಕರಣದ ಕ್ರಮಗಳನ್ನು ಹಾಗೂ ಜಾತ್ರಾ ಸಂಸ್ಕೃತಿಯ ಬಹುಮುಖಿ ಆಯಾಮಗಳನ್ನು ಆಧುನಿಕ ನೆಲೆಗಟ್ಟಿನಲ್ಲಿ ಯೋಚಿಸಬೇಕಾದ ತುರ್ತು ಹೊಸ ತಲೆಮಾರಿಗಿರುವ ಸವಾಲಾಗಿದೆ. ಪ್ರಮುಖವಾಗಿ ಜಾತ್ರೆ ಮತ್ತು ಜಾಗತೀಕರಣದ ಪ್ರಭಾವಗಳನ್ನು ಮುಖಾಮುಖಿಯಾಗಿಸಿ ಪರಂಪರೆ ಮತ್ತು ಆಧುನಿಕ ನೆಲೆಗಟ್ಟಿನಲ್ಲಿ ಜಾತ್ರೆಗಳನ್ನು ವಿಶ್ಲೇಷುವ ಕ್ರಮ ಬಹು ಮಾನ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**

1. ಕರಿಗೌಡ ಬೀಚನಹಳ್ಳಿ –– ಜಾತ್ರೆಗಳು.
2. ಡಾ. ಕಲಬುರ್ಗಿ.ಎಂ.ಎಂ –– ಜಾನಪದ ಮಾರ್ಗದರ್ಶನ
3. ರಹಮತ್‌ತರೀಕೆರೆ –– ಪ್ರತಿ ಸಂಸ್ಕೃತಿ
4. ರಹಮತ್‌ತರೀಕೆರೆ – ಸಾಂಸ್ಕೃತಿಕ ಅಧ್ಯಯನ
5. ಶಿವಕುಮಾರಸ್ವಾಮಿ.ಸಿ.ಎಸ್ –– ಕರ್ನಾಟಕದ ಜಾತ್ರೆಗಳು
6. ಡಾ.ಸಿದ್ಧಲಿಂಗಯ್ಯ –– ಗ್ರಾಮ ದೇವತೆಗಳು